ದಿನಾಂಕಃ 25-01-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಬಿ ಎ ಎಸ್ ವಕೀಲರಿಂದಃ

ನಾನು ಕಾಳೇನಹಳ್ಳಿಯಲ್ಲಿ ವಾಸವಾಗಿದ್ದೇನೆ. ಕಾಳೇನಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದಿದ್ದಾರೆ. ನಾನು ಕಾಳೇನಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ಆಧಾರ ಕಾರ್ಡು, ಮತದಾರರ ಚೀಟಿ ಹಾಜರುಪಡಿಸಿಲ್ಲಾ. ನಾನು ಸುಳ್ಳುಗಾಳೇಲೆ ಗ್ರಾಮ , ಶನಿವಾರ ಸಂತೆ ಅಂಚೆಯಲ್ಲಿ ವಾಸವಾಗಿದ್ದೇನೆ. ನಾನು ಸದರಿ ಸ್ಥಳದಲ್ಲಿ 30 ವರ್ಷದಿಂದ ವಾಸವಾಗಿದ್ದೇನೆ. ನನ್ನ ತಾಯಿಯ ಹೆಸರು ಫಾತಿಮಾ. 2 ನೇ ವಾದಿ ನನ್ನ ತಂಗಿ. ನನ್ನ ತಾಯಿ ಮಾತ್ರ ಕಾಳೇನಹಳ್ಳಿಯಲ್ಲಿ ವಾಸವಾಗಿದ್ದು, ನಾವು ಅಕ್ಕತಂಗಿಯರೆಲ್ಲಾ ಶನಿವಾರ ಸಂತೆಯಲ್ಲಿ ವಾಸವಾಗಿದ್ದೇವೆ. ನನ್ನ ತಾಯಿ ಫಾತೀಮಾ ಕಾಳೇನಹಳ್ಳಿಯಲ್ಲಿ ವಾಸವಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲಾ , ನನ್ನ ಬಳಿ ಇವೆ. ಪ್ರತಿವಾದಿಗಳು ನನ್ನ ಚಿಕ್ಕ ವಯಸ್ಸಿನಿಂದ ಪರಿಚಯ. ನನ್ನ ತಂದೆಯವರು ಮೂಲತಃ ಕೊಡಗು ಜಿಲ್ಲೆಯ ಶನಿವಾರ ಸಂತೆಯವರು. ನನ್ನ ತಂದೆಯವರು ಕಾಳೇನಹಳ್ಳಿಗೆ ಬಂದು ಎಷ್ಟು ವರ್ಷ ಆಯಿತೆಂದು ನನಗೆ ಗೊತ್ತಿಲ್ಲಾ. ನಿಮ್ಮ ತಂದೆಯವರು ಜಮೀನು ಕಾಳೇನಹಳ್ಳಿಗೆ ಬಂದಿದ್ದು, ನಾವುಗಳೆಲ್ಲಾ ಶನಿವಾರ ಸಂತೆಯಲ್ಲಿ ಇದ್ದೇವೆ ಎಂದರೆ ಸರಿಯಲ್ಲಾ, ನೀವು ಹುಟ್ಟಿದ್ದು, ಬೆಳೆದಿದ್ದು ಶನಿವಾರ ಸಂತೆಯಲ್ಲಿ ಎಂದರೆ ಸರಿಯಲ್ಲಾ. ಕಾಳೇನಹಳ್ಳಿಯಲ್ಲಿ ಹುಟ್ಟಿರುವ ಬಗ್ಗೆ ಜನನ ಪ್ರಮಾಣ ಪತ್ರವನ್ನು ಕೊಟ್ಟಿಲ್ಲಾ ನನ್ನ ತಂದೆಯವರಿಗೆ ಶನಿವಾರ ಸಂತೆಯಲ್ಲಿ ಸ್ವಂತ ಮನೆ ಇದೆ ಎಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ಕಾಳೇನಹಳ್ಳಿಯಲ್ಲಿ ಇದೆ ಎಂದಿದ್ದಾರೆ. ಕಾಳೇನಹಳ್ಳಿಯಲ್ಲಿರುವ ನನ್ನ ತಂದೆಗೆ ಇರುವ ಮನೆಯ ನಂಬರ್ ನನಗೆ ಗೊತ್ತಿಲ್ಲಾ ಮತ್ತು ಅದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲಾ. ಸದರಿ ಮನೆಯು ಕೈ ಹೆಂಚಿನ ಮನೆ. ಸದರಿ ಮನೆಯ ಚೆಕ್ಕುಬಂದಿ ಹೇಳಲು ನನಗೆ ಆಗುವುದಿಲ್ಲ.

ಪ್ರತಿವಾದಿಗಳ ತಂದೆಯ ಹೆಸರು ಗುರುದೇವ ಮತ್ತು ತಾಯಿಯ ಹೆಸರು ಜಾನಕಮ್ಮ. ಅವರ ತಂದೆ ತಾಯಿಗಳು ನನಗೆ ಚಿಕ್ಕ ವಯಸ್ಸಿನಿಂದ ಪರಿಚಯ. ಪ್ರತಿವಾದಿಗಳಿಗೆ ಸುಮಾರು ಎಷ್ಟು ವಯಸ್ಸು ಆಗಿದೆ ಎಂದು ನನಗೆ ಗೊತ್ತಿಲ್ಲಾ. ದಾವಾ

ಆಸ್ತಿಯ ಸ.ನಂಃ 748/ಪಿ15. ದಾವಾ ಆಸ್ತಿ ನನ್ನ ತಂದೆಗೆ ಮೂಲತಃ ದರಕಾಸ್ತು ಮೂಲಕ ಬಂದಿದೆ ಎಂದರೆ ಸರಿ. ಸದರಿ ಆಸ್ತಿಯು 1995 ರಲ್ಲಿ ದರಕಾಸ್ತು ಮುಖಾಂತರ ಬಂದಿದೆ. 1995 ನೇ ಸಾಲಿನಲ್ಲಿ ನನ್ನ ತಂದೆಯೊಂದಿಗೆ ನಾವೆಲ್ಲರೂ ಒಟ್ಟಿಗೆ ಇದ್ದೇವು. 1995 ರಲ್ಲಿ ಸಾಗುವಳಿಯಾದ ಸಮಯದಲ್ಲಿ ನಿಮಗೆ ವಯಸ್ಸು ಎಷ್ಟು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲಾ. ಸಾಗುವಳಿ ಸಮಯದಲ್ಲಿ ನಿಮ್ಮ ತಂದೆ ಒಬ್ಬರೇ ಅಲ್ಲಿ ಇದ್ದು, ನಿವೇಲ್ಲರೂ ಶನಿವಾರ ಸಂತೆಯಲ್ಲಿ ಇದ್ದೀರಿ ಎಂದರೆ ಸರಿಯಲ್ಲಾ. ಸದರಿ ವಿಚಾರವನ್ನು ವಾದಪತ್ರದಲ್ಲಿ ಬರೆಸಿ ಹಾಕಿಲ್ಲ . ನನ್ನ ವಾದಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತು. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಕಿರುಕುಳ ನೀಡುತ್ತಾರೆ ಎಂದು ಬರೆಸಿದ್ದೇನೆ. ಅದನ್ನು ಬಿಟ್ಟು ಬೇರೆ ಏನು ಬರೆಸಿಲ್ಲಾ. ಪ್ರತಿವಾದಿಗಳು ಯಾವ ದಿನಾಂಕ , ತಿಂಗಳಿನಿಂದ ಕಿರುಕುಳ ನೀಡುತ್ತಿದ್ದರು ಎಂದು ನನಗೆ ಗೊತ್ತಿಲ್ಲಾ. ಅದನ್ನು ನೋಡಿದವರು ಇದ್ದಾರೆ. ಪೊಲೀಸರಿಗೆ ಫಿರ್ಯಾದಿ ನೀಡಿದ್ದು , ಯಾವ ದಿನಾಂಕ ಮತ್ತು ತಿಂಗಳು ನೀಡಿದ್ದಾರೆಂದು ಗೊತ್ತಿಲ್ಲಾ ಆದರೆ ಅದರ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ಪ್ರತಿವಾದಿಗಳ ತಂದೆಯ ಜಮೀನನ್ನು ನೋಡಿದ್ದೇನೆ.

ನಮ್ಮ ಜಮೀನಿನ ಸ.ನಂ. ಮಾತ್ರ ನನಗೆ ಗೊತ್ತು . ಬೇರೆ ಜಮೀನಿನ ಸ.ನಂ. ನನಗೆ ಗೊತ್ತಿಲ್ಲಾ, ಗುರುದೇವರವರಿಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲಾ. ಅವರ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲಾ. ದಾವಾ ಅನೂಸೂಚಿಯಲ್ಲಿ ತೋರಿಸಿರುವ ಚೆಕ್ಕುಬಂದಿಯಲ್ಲಿ ಇರುವ ಆಜಾಬಾಜುದಾರರ ಜಮೀನುಗಳ ಚೆಕ್ಕುಬಂದಿ ನನಗೆ ಗೊತ್ತಿಲ್ಲಾ. ಚನ್ನಮ್ಮ ರವರ ಪರಿಚಯವಿದೆ. ಅವರಿಗೂ ನನಗೂ ದ್ವೇಷ ಇಲ್ಲಾ.

ಈ ಹಂತದಲ್ಲಿ ಮುಂದಿನ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕೋರಿಕೆ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.